# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 573 |
| ಸದಸ್ಯರ ಹೆಸರು | ಡಾ. ಡಿ. ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 20-02-2023 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕೋವಿಡ್-19ರ ಅಪಾಯವನ್ನು ನಿಯಂತ್ರಿಸುವ ಸಲುವಾಗಿ 'ಬೂಸ್ಟರ್ ಡೋಸ್ ಲಸಿಕೆಯನ್ನು ನೀಡಲಾಗುತ್ತಿದೆಯೇ; | 'ಬೂಸ್ಟರ್ ಡೋಸ್' ಲಸಿಕೆಯನ್ನು ನೀಡಲಾಗುತ್ತಿದೆ. |
| ಆ | ಇಲ್ಲಿಯವರೆಗೆ ಎಷ್ಟು ಜನರಿಗೆ ಕೋವಿಡ್ ಲಸಿಕೆ ನೀಡಿದೆ ಹಾಗೂ 'ಬೂಸ್ಟರ್ ಡೋಸ್' ನೀಡಿರುವವರ ಸಂಖ್ಯೆ ಎಷ್ಟು; (ವಿವರ ನಿಡುವುದು) | ರಾಜ್ಯವು 12 ವರ್ಷ ಮೇಲ್ಪಟ್ಟವರ ಲಸಿಕಾಕರಣಕ್ಕೆ 5.41 ಕೋಟಿ ಗುರಿ ಹೊಂದಿದ್ದು, ದಿನಾಂಕ: 10.02.2023 ರವರೆಗೆ 5.51 ಕೋಟಿ (ಶೇ.102) ರಷ್ಟು ಫಲಾನುಭವಿಗಳಿಗೆ ಮೊದಲನೇ ಡೋಸ್, 5.53 ಕೋಟಿ (ಶೇ.102) ರಷ್ಟು ಫಲಾನುಭವಿಗಳಿಗೆ ಎರಡನೇ ಡೋಸ್ ಹಾಗೂ 1.15 ಕೋಟಿ (ಶೇ.23)ರಷ್ಟು ಫಲಾನುಭವಿಗಳಿಗೆ ಮುನ್ನೆಚ್ಚರಿಕೆ ಡೋಸ್ ಲಸಿಕಾಕರಣ ನಡೆಸಲಾಗಿದೆ.<br><br>(ವಿವಿಧ ವರ್ಗಗಳ ಲಸಿಕಾಕರಣದ ಪ್ರಗತಿಯ ವರದಿಯನ್ನು **ಅನುಬಂಧ-1ರಲ್ಲಿ** ಲಗ್ತತಿಸಿದೆ) |
| ಇ | ಇನ್ನೂ ಲಸಿಕೆ ನೀಡದೆ ಇರುವವರಿಗೆ ಲಸಿಕೆ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು; ಬೂಸ್ಟರ್ ಡೋಸ್ ಲಸಿಕೆಯನ್ನು ಎಲ್ಲರಿಗೂ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು; (ಮಾಹಿತಿ ನೀಡುವುದು) | ರಾಜ್ಯದಲ್ಲಿ ಕೋವಿಡ್-19 ಪ್ರಕರಣಗಳು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿರುತ್ತವೆ. ಆದಾಗ್ಯೂ ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಲಸಿಕಾಕರಣ ನಡೆಸಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ರಾಜ್ಯದಲ್ಲಿ ಲಭ್ಯವಿರುವ ಲಸಿಕಾ ದಾಸ್ತಾನಿಗನುಗುಣವಾಗಿ ಎಲ್ಲಾ ಜಿಲ್ಲೆಗಳಲ್ಲಿ ಕೋವಿಡ್-19 ಲಸಿಕಾ ಮೇಳ ನಡೆಸಲಾಗುತ್ತಿದೆ.<br>• ಮನೆ ಮನೆಗೆ ಲಸಿಕಾ 'ಮಿತ್ರ ಅಭಿಯಾನದಡಿಯಲ್ಲಿ ಅರ್ಹ ಫಲಾನುಭವಿಗಳ ಮನೆಗೆ ತೆರಳಿ ಕೋವಿಡ್-19 ಲಸಿಕೆಯ ಮೊದಲನೇ/ ಎರಡನೇ ಹಾಗೂ ಮುನ್ನೆಚ್ಚರಿಕೆ ಡೋಸ್ ಗೆ ಬಾಕಿ ಇದ್ದು ಇನ್ನೂ ಲಸಿಕೆ ಪಡೆಯದವರಿಗೆ ಮನವೊಲಿಸಿ ಲಸಿಕಾಕರಣ ನಡೆಸಲಾಗಿದೆ.<br>• ಭಾರತೀಯ ವೈದ್ಯಕೀಯ ಸಂಘ, ಎನ್.ಜಿ.ಒ ಗಳು ಮತ್ತು ಸಾಮಾಜಿಕ ಪ್ರಭಾವಿ ವ್ಯಕ್ತಿಗಳ ಬೆಂಬಲ ಹಾಗೂ ಸಹಕಾರದೊಂದಿಗೆ ಲಸಿಕೆ ನಿರಾಕರಿಸುವ ವ್ಯಕ್ತಿಗಳ ಮನವೊಲಿಸಿ ಲಸಿಕಾಕರಣಕ್ಕೆ ಸಜ್ಜುಗೊಳಿಸಲಾಗುತ್ತಿದೆ.<br>• ಮುನ್ನೆಚ್ಚರಿಕೆ ಡೋಸ್ ಲಸಿಕಾಕರಣದ ಹೆಚ್ಚಿನ ಪ್ರಗತಿಗಾಗಿ ಇತರೆ ಇಲಾಖೆಗಳ ಸಹಕಾರವನ್ನು ಕೋರಲಾಗಿದೆ. |

| | | |
|---|---|---|
| | | • ಲಸಿಕೆ ನಿರಾಕರಣೆ, ಲಸಿಕೆ ಹಿಂಜರಿಕೆ ಹಾಗೂ ಮಾಹಿತಿ ಕೊರತೆಯಂತಹ ಅಂಶಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>• ರೇಡಿಯೋ ಕಾರ್ಯಕ್ರಮ, ದೂರದರ್ಶನ ಸಂವಹನ ಮಾಧ್ಯಮ, ಸಾಮಾಜಿಕ ಹಾಗೂ ಧಾರ್ಮಿಕ ಮುಖಂಡರಿಂದ ಮನವೊಲಿಕೆಯ ಸಂದೇಶಗಳ ಮುಖಾಂತರ ಲಸಿಕಾಕರಣದ ಮಹತ್ವವನ್ನು ಪ್ರಚುರಗೊಳಿಸಲಾಗುತ್ತಿದೆ. |
| **ಈ** | **ಕೋವಿಡ್‌ನ ಹೊಸ ರೂಪಾಂತರವನ್ನು ಸೂಕ್ತವಾಗಿ ತಡೆಯಲು ಸರ್ಕಾರ ಕೈಗೊಂಡ ಮುನ್ನೆಚ್ಚರಿಕಾ ಕ್ರಮಗಳೇನು? (ವಿವರ ನೀಡುವುದು)** | ಭಾರತವು ಸೇರಿದಂತೆ ವಿಶ್ವದಾದ್ಯಂತ ಎಲ್ಲಾ ದೇಶಗಳಲ್ಲೂ ಕೋವಿಡ್-19 ಪ್ರಕರಣಗಳಲ್ಲಿ ಗಣನೀಯ ಇಳಿಕೆಯನ್ನು ಗಮನಿಸಲಾಗಿದೆ. ಆದಾಗ್ಯೂ ಡಿಸೆಂಬರ್ 2022 ಹಾಗೂ ಜನವರಿ 2023ರಲ್ಲಿ ಪ್ರಪಂಚದ ಅನೇಕ ದೇಶಗಳಲ್ಲಿ ಕೋವಿಡ್-19ನ ಹೊಸ ರೂಪಾಂತರಿಗಳು ವರದಿಯಾದ ಸಂದರ್ಭದಲ್ಲಿ ಭಾರತ ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯದಲ್ಲಿ ಕೈಗೊಳ್ಳಲಾಗುತ್ತಿದೆ.<br>1. ವಿದೇಶದಿಂದ ಆಗಮಿಸುವ ಪ್ರಯಾಣಿಕರ ಗಂಟಲು ದ್ರುವದ ಮಾದರಿಯನ್ನು ಪೈಕಿ ಶೇಕಡ 2 ರಷ್ಟನ್ನು ಯಾದೃಚ್ಛಿಕವಾಗಿ (Random) ಕೋವಿಡ್-19 ಪರೀಕ್ಷೆಗೆ ಒಳಪಡಿಸಲಾಗುತ್ತಿದ್ದು, ಅದನ್ನೇ ಮುಂದುವರಿಸಲು ಸೂಚಿಸಲಾಗಿದೆ.<br>2. ಕೋವಿಡ್-19 ಪರೀಕ್ಷೆಗೆ ಮಾದರಿಗಳನ್ನು ನೀಡಿದ ಪ್ರಯಾಣಿಕರು ಫಲಿತಾಂಶ ದೊರೆಯುವವರೆಗೂ ಮನೆಯಲ್ಲಿ ಪ್ರತ್ಯೇಕವಾಗಿರುವಂತೆ ಸೂಚಿಸಿ ಮಾಹಿತಿ ನೀಡಲಾಗುತ್ತಿದೆ. ಸದರಿ ಮಾದರಿಗಳ ಪೈಕಿ ಪಾಸಿಟಿವ್ ಫಲಿತಾಂಶ ಬರುವ ಮಾದರಿಗಳನ್ನು ಜೀನೋಮ್ ಸೀಕ್ವೆನ್ಸಿಂಗ್ ಗೆ ಕಳುಹಿಸುವುದು ಕಡ್ಡಾಯವಾಗಿದೆ.<br>3. ರೂಪಾಂತರಿ ತಳಿಗಳನ್ನು ಪತ್ತೆ ಹಚ್ಚಲು ರಾಜ್ಯದಲ್ಲಿರುವ INSACOG Network ನ ಜೀನೋಮ್ ಸೀಕ್ವೆನ್ಸಿಂಗ್ ಲ್ಯಾಬೋರೇಟರಿಗಳಿಗೆ ಮಾದರಿಗಳನ್ನು ಆದ್ಯತೆಯ ಮೇರೆಗೆ ಪರೀಕ್ಷಿಸಿ ಫಲಿತಾಂಶವನ್ನು ನೀಡುವಂತೆ ಸೂಚಿಸಲಾಗಿದೆ.<br>4. ರಾಜ್ಯದಲ್ಲಿ ಕೋವಿಡ್-19 ಪರಿಸ್ಥಿತಿಯು ಬಹುತೇಕ ನಿಯಂತ್ರಣದಲ್ಲಿದ್ದರೂ ಸಹ ನಿಕಟವಾಗಿ ಮೇಲ್ವಿಚಾರಣೆ ನಡೆಸಿ ನಿಗಾವಣೆಯನ್ನು (Close monitoring) ಇರಿಸಲಾಗಿದೆ. |

**ಕಡತ ಸಂಖ್ಯೆ: ಆಕುಕ 26 ಎಸ್‌ಎಂಎಂ 2023**

**(ಡಾ.ಕೆ ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು